

ಮರ) ಎಷ್ಟು ಭೌಮಾಕಾರವಾಗಿ, ಬೃಹತ್ತಾಗಿ ಇರುತ್ತವೆ! ಇವೆಲ್ಲ ವೈಭವದ ಮಧ್ಯೆ ಮದ್ದಮಹೇಶ್ವರ ದೇಗುಲದ ಸುತ್ತಣ ಪರಿಸರವೊಂದೇ ಹಸಿರುಹಸಿರಾಗಿ ರಮ್ಯವಾಗಿದೆ.

ಮುಂಜಾವದಿಂದಲೂ ನಡೆದು ಆಯಾಸಗೊಂಡಿದ್ದ ನಾವು ಲಾಡ್ಜ್‌ನಲ್ಲಿ ಮಲಗಿದ ಕೂಡಲೇ ನಿದ್ರಾವಶರಾದೆವು. ಸಾಯಂಕಾಲ ಐದಕ್ಕೆ ಏಳಬೇಕಾದ್ದುದ್ದರಿಂದ ಅಲಾರಂ ಇಟ್ಟು ಮಲಗಿದೆವು. ಅಲಾರಂ ಸದ್ದು ಮಾಡಿದಾಗ ಎದ್ದು ನೋಡಿದರೆ, ಚಳಿ ತಡೆಯಲಾಗುತ್ತಿಲ್ಲ! ಹೊರಗೆಲ್ಲ ಬಿಸಿಲು ಮರೆಯಾಗಿದೆ; ಮಂಜು ಮುಸುಕಿ ಎಲ್ಲ ಮಸುಕಾಗಿದೆ! ಶೌಚಾದಿಯೆಲ್ಲ ಮುಗಿಸಿ, ಅನಂತರ ದೇವಸ್ಥಾನಕ್ಕೆ ಹೋದೆವು.

ಕೆಲವೊಂದು ಆರಂಭಿಕ ಪೂಜೆ, ಮಂತ್ರಾದಿಗಳ ನಂತರ 'ಶೃಂಗಾರ ಆರತಿ' ಆರಂಭವಾಯಿತು. ಶಂಖ, ಜಾಗಟೆ, ಗಂಟೆಗಳ ಧ್ವನಿ ಜೋರಾಗಿತ್ತು; ಪೂಜಾರಿಗಳ ಘಂಟಾನಿನಾದವೂ ಕೇಳಿ ಬರುತ್ತಿತ್ತು. ಆರತಿ ಬೆಳಗುತ್ತ ಪೂಜಾರಿಗಳು ನಾನಾ ಬಗೆಯಲ್ಲಿ ನರ್ತಿಸತೊಡಗಿದರು. ನರ್ತನದ ಮೂಲಕ ಆರತಿ ಮಾಡುವುದು ಅಲ್ಲಿನ ವಿಶೇಷತೆಯೋ ಏನೋ. ಪೂಜಾರಿಗಳು ಒಂದೊಂದು ಶ್ಲೋಕ, ಸ್ತುತಿಗಳನ್ನು ಹೇಳುವಾಗಲೂ ಅವರ ಮುಖ ಭಾವದಿಂದ ದೀಪ್ತವಾಗುತ್ತಿತ್ತು. ಭಾವಕ್ಕೆ ಅನುಗುಣವಾಗಿ ಹೆಜ್ಜೆಹಾಕುತ್ತ, ನರ್ತಿಸುತ್ತ ಆರತಿ ಸುತ್ತುತ್ತ ನಡೆಸಿದ ಶೃಂಗಾರ ಆರತಿ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಬಹಳ ದೀರ್ಘವಾದ ಈ ಆರತಿ ನಿಂತ ಬಳಿಕ ದೇವರಿಗೆ ನಮಸ್ಕಾರ ಮಾಡಿ, ಮರಳಿ ಲಾಡ್ಜಿಗೆ ಬಂದೆವು. ಆಗಲೇ ಕತ್ತಲಾಗಿತ್ತು. ಸುಮಾರು ಏಳು-ಏಳೂವರೆ ಹೊತ್ತಿಗೆ ಊಟ ಮುಗಿಸಿದೆವು. ಮೈ ಕೊರೆಯುವ ಚಳಿ ಬೇರೆ, ತಣ್ಣಗೆ ಇಬ್ಬನಿ ಬೀಳುತ್ತಿತ್ತು. ಕೋಣೆಗೆ ಬಂದು ಬೆಚ್ಚಗೆ ಹೊದ್ದು ಮಲಗಿದರೆ, ಗಾಢ ನಿದ್ರೆ ನಮ್ಮನ್ನಾವರಿಸಿತು. ಮರುದಿನ ಬೆಳಗ್ಗೆ ೬ ಗಂಟೆಗೆ ಬೂಢಾ ಮದ್ದಮಹೇಶ್ವರಕ್ಕೆ ಹೊರಡೋಣ ಎಂದು ಗೈಡ್ ಹೇಳಿದ. ಅದು ಬೆಟ್ಟದ ತುದಿ. ಅಲ್ಲಿಂದ ಚೌಖಂಬಾ ಪರ್ವತ ಸಮೀಪದಿಂದ ಕಾಣುತ್ತದೆ. ಬೆಳಗ್ಗೆ ಬಿಸಿಲಿನ ಹೊಂಬಣ್ಣದಿಂದ ಅದು ಇನ್ನಷ್ಟು ಸುಂದರ.

**೬. ಬೂಢಾ ಮದ್ದಮಹೇಶ್ವರ – ಕಾಣದ ಚೌಖಂಬಾ ಪರ್ವತ :** ಬೆಳಗ್ಗೆ ಎದ್ದು ಶೌಚಾದಿ ಮುಗಿಸಿ, ಮುಖ ತೊಳೆದು ನಾವು ಸಿದ್ಧರಾದಾಗ ಆಗಲೇ ಆರುಗಂಟೆಯಾಗಿ ಬಿಟ್ಟಿತ್ತು. ತರಾತುರಿಯಿಂದ ನಾವು ಗೈಡ್‌ನ ಮಾತಿನಂತೆ ಅವನ ಹಿಂದೆಯೇ ಬೆಟ್ಟವೇರುತ್ತ ಹೊರಟೆವು. ಅಲ್ಲಿ ಮರಗಳಿಲ್ಲ; ಮಣ್ಣಿನ ರಸ್ತೆಯಲ್ಲಿ ಏರುತ್ತ ಹೋದಂತೆ ಮೋಡಗಳು ಆವರಿಸತೊಡಗಿದವು. ದೂರದಲ್ಲಿ ಚೌಖಂಬಾ ಪರ್ವತದ ಸುತ್ತ ಮೋಡ ಮುಸುಕಿ, ಏನೂ ಕಾಣಿಸದಾಗಿತ್ತು. ಏನಾದರಾಗಲಿ, ಬೆಟ್ಟದ ತುದಿ ಏರಿಬಿಡೋಣ ಎಂದು ಹೊರಟೆವು. ಇನ್ನೂ ಮಳೆ ಬರುತ್ತಿರಲಿಲ್ಲ. ಆದರೆ ಆವರಿಸಿದ ಮೋಡ ಅಸಾಧ್ಯ ಚಳಿಯನ್ನು ತಂದೊಡ್ಡಿದ್ದರಿಂದ, ನಡೆಯುವುದು ತುಂಬಾ ಕಷ್ಟವೆನಿಸುತ್ತಿತ್ತು. ಬೆಟ್ಟದ ಮೇಲೇರಿದ ನಾವು ಅಲ್ಲಿ ಬೂಢಾ ಮದ್ದಮಹೇಶ್ವರನ ದರ್ಶನ ಮಾಡಿದೆವು. ಅಲ್ಲಿ ಕೆಲವು ಕಲ್ಲುಗಳನ್ನು ಜೋಡಿಸಿಬಿಟ್ಟಿದ್ದರು; ಹಳ್ಳಿಯ ಜನ ಅದನ್ನೇ ಪೂಜೆ ಮಾಡುತ್ತಿದ್ದರು. ದೇಗುಲವಿಲ್ಲ , ಮಂಟಪವಿಲ್ಲ ; ಪೂಜೆಯಿಲ್ಲ. ಬೆಟ್ಟದ ತುದಿಯ ಬಟಾಬಯಲಲ್ಲಿ ನಿಂತಿದ್ದಾನೆ, ಬೂಢಾ ಮದ್ದಮಹೇಶ್ವರ. ಹೆಸರಿನಿಂದ ಅರ್ಥವಾಗುವುದೇನೆಂದರೆ ಮದ್ದಮಹೇಶ್ವರನ ದೇಗುಲ ಕೆಳಗೆ ಸ್ಥಾಪನೆಯಾಗುವುದಕ್ಕೂ ಮುನ್ನ ಬಹುಶಃ ಇಲ್ಲೇ ಪೂಜೆ ಮಾಡುತ್ತಿದ್ದಿರಬೇಕು. ಅಲ್ಲಿಂದ ಸುತ್ತಮುತ್ತಣ



ಬೂಢಾ ಮದ್ದಮಹೇಶ್ವರ

ಬೆಟ್ಟಗಳ ಸಾಲುಗಳೆಲ್ಲ ಕಾಣಿಸುತ್ತಿದ್ದವು. ಬೆಟ್ಟದ ತುದಿಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಓಡಾಡಿ ಸುತ್ತಣ ಪ್ರದೇಶಗಳನ್ನೆಲ್ಲ ನೋಡಿದೆವು. ಎಲ್ಲೆಡೆ ಕಾಡುಗಳಿಂದ ತುಂಬಿದ ಬೆಟ್ಟಗಳು; ತುದಿಯಲ್ಲಿ ಖಾಲಿ ಪ್ರದೇಶ (ಬುಗ್ಯಾಲ್)ಗಳು; ಅಲ್ಲಲ್ಲಿ ಮರಗಳಿಲ್ಲದ ದೊಡ್ಡ ಬಂಡೆಗಳು; ತೀರ ಎತ್ತರದ ಬೆಟ್ಟಗಳ ತುದಿಯಲ್ಲಿ ಮಾತ್ರ ಹಿಮ ಕವಿದು ಬಿಳಿಯಾಗಿ ಕಾಣುತ್ತವೆ. ಬರಬರುತ್ತಾ ದೂರದ ದೃಶ್ಯಗಳೆಲ್ಲ ಮಂಜಾದವು. ಎಲ್ಲೆಡೆ ಮೋಡ ಮುಸುಕಿ, ಮಳೆ ಸುರಿಯಲಾರಂಭಿಸಿತು. ಮಳೆ ಆರಂಭವಾದದ್ದೇ ತಡ, ಚಳಿಯಿಂದ ನಮ್ಮ ಕೈಕಾಲುಗಳೆಲ್ಲ ಮರಗಟ್ಟಿ, ರಕ್ತ ಹೆಪ್ಪುಗಟ್ಟಿದಂತಾಯಿತು. ನಾವೆಲ್ಲ ಓಡೋಡುತ್ತ ಮದ್ದಮಹೇಶ್ವರ ದೇಗುಲದತ್ತ ಬರುವಾಗ, ದೂರದ ಚೌಖಂಬಾ ಪರ್ವತ ನಮ್ಮತ್ತ ನೋಡಿ ಅಣಕಿಸುತ್ತ, 'ನೋಡಿದಿರಾ! ನನ್ನ ದರ್ಶನ ಅಷ್ಟು ಸುಲಭವಲ್ಲ ಮಕ್ಕಳೇ; ಇನ್ನೊಂದು ಬಾರಿ ಬನ್ನಿ' ಎಂದು ಹೇಳಿದಂತೆ ಅನ್ನಿಸಿತು. ಅದರ ಬುಡಭಾಗ ಮಾತ್ರ ಕಾಣಿಸುತ್ತಿತ್ತು – ಅದೂ ಹಿಮಾವೃತವೆ. ಮೇಲ್ಭಾಗವೆಲ್ಲ ಮೋಡಗಳಿಂದ ಆವೃತವಾಗಿ ಏನೂ ಕಾಣಿಸುತ್ತಿರಲಿಲ್ಲ. ಲಾಡ್ಜಿಗೆ ಮರಳುವಾಗ ನಾವು ಪ್ಲಾಸ್ಟಿಕ್‌ನ ಹತ್ತು ರೂಪಾಯಿ ರೈನ್‌ಕೋಟ್ ಹಾಕಿಕೊಂಡಿದ್ದರೂ, ಚೆನ್ನಾಗಿ ಒದ್ದೆಯಾಗಿಬಿಟ್ಟೆವು. ತೆಳುವಾದ ಆ ರೈನ್‌ಕೋಟ್ ತುಸು ಓಡಾಡಿದರೇನೇ ಹರಿದುಹೋಗುವಂತಿತ್ತು!

ಸುಮಾರು ಎರಡು ಗಂಟೆಗೆ ಮದ್ದಮಹೇಶ್ವರದಿಂದ ಮರಳಿ ಹೊರಟೆವು. ಇಳಿಯುತ್ತಾ ಬರುವಾಗ ಅಲ್ಪ ಸಮಯದಲ್ಲೇ ಕಾಲು ನಡಿಗೆಯ ಪ್ರದೇಶವನ್ನು ಕ್ರಮಿಸುತ್ತಿದ್ದೆವು. ಇಳಿದು ಬರುವಾಗ ಹೆಚ್ಚು ಮಾತುಕತೆಯಿಲ್ಲ ; ಇಳಿದುಬರುವ ರಭಸದಲ್ಲಿ ಮಾತನ್ನು ಮರೆತೇ ಬಿಟ್ಟಿದ್ದೆವು. ಆಯಾಸವಾದಾಗ ಮಾತ್ರ ಒಂದೆಡೆ ನಿಂತು ಅಥವಾ ಕುಳಿತು ವಿಶ್ರಮಿಸುತ್ತಿದ್ದೆವು. ಸುಮಾರು ಒಂದು ಗಂಟೆಯ ಹೊತ್ತಿಗೆ ಗೌಂಡರ್ ಗ್ರಾಮವನ್ನು ತಲುಪಿ, ಅಲ್ಲೇ ಊಟ ಮುಗಿಸಿದೆವು. ಮತ್ತೆ ಅಲ್ಲಿಂದ ಹೊರಟು ಸಮತಟ್ಟಾದ, ಏರಿಳಿತಗಳಿಂದ ಕೂಡಿದ ರಸ್ತೆಯ ಮಾರ್ಗವನ್ನು ಕ್ರಮಿಸಿ, ಸಾಯಂಕಾಲ ಮೂರರ ಹೊತ್ತಿಗೆ 'ರಾಂಸಿ' ತಲುಪಿದೆವು. ಅಲ್ಲಿಂದ ಮುಂದಕ್ಕೆ ಬಸ್ಸಿನಲ್ಲಿ ಅಥವಾ ಜೀಪಿನಲ್ಲಿ ಪ್ರಯಾಣಿಸಬಹುದು; ಆದರೆ ಅಂದು ನಡೆದು ತುಂಬಾ ಆಯಾಸಗೊಂಡದ್ದರಿಂದ, ರಾಂಸಿಯಲ್ಲೇ ತಂಗಲು ನಿರ್ಧರಿಸಿದೆವು. ಅಲ್ಲಿ ಒಳ್ಳೆಯ ಲಾಡ್ಜ್ ಅಥವಾ ಕೋಣೆಗಳು ಸಿಗಲಿಲ್ಲ. ರಸ್ತೆ ಬದಿಯಲ್ಲೇ ಇದ್ದ ಅಂಗಡಿಯೊಂದರ ಬಳಿ, ಇದ್ದ ಕೋಣೆಯಲ್ಲೇ ಇಳಿದುಕೊಳ್ಳಬೇಕಾಯಿತು – ಅದೂ ದುಬಾರಿ ಬಾಡಿಗೆಗೆ. ಬೇರೆ ದಾರಿಯಿಲ್ಲದೆ ಅಲ್ಲೇ ಮಲಗಲು ವ್ಯವಸ್ಥೆ ಮಾಡಿಕೊಂಡೆವು.

*(ಮುಂದುವರಿಯುವುದು)*




ಸ್ವಾಮಿ ನಿತ್ಯಸ್ಥಾನಂದ

# ಸಂನ್ಯಾಸ ಮತ್ತು ತ್ಯಾಗ

ಗೀತೆಯ ಹದಿನೆಂಟನೆಯ ಅಧ್ಯಾಯದ ಪ್ರಾರಂಭದಲ್ಲಿಯೇ ಅರ್ಜುನನು ಒಂದು ಬಹು ಮುಖ್ಯವಾದ ಪ್ರಶ್ನೆಯನ್ನು ಕೇಳುತ್ತಾನೆ: ಸಂನ್ಯಾಸ ಮತ್ತು ತ್ಯಾಗ ಇವುಗಳ ನಿಜವಾದ ಅರ್ಥವೇನು? ಸಂನ್ಯಾಸಕ್ಕೆ ಸೀಮಿತವಾದ ಅರ್ಥವಿದೆ, ಆದರೆ ತ್ಯಾಗದ ಅರ್ಥ ಅತಿ ವಿಶಾಲವಾದುದು. ಕಾಮ್ಯಕರ್ಮಗಳನ್ನು ಬಿಡುವುದೇ ಸಂನ್ಯಾಸವೆಂದು ಶ್ರೀಕೃಷ್ಣನು ಎರಡನೆಯ ಶ್ಲೋಕದಲ್ಲಿ ಹೇಳುತ್ತಾನೆ. ಸಾಂಪ್ರದಾಯಿಕವಾಗಿ ಕರ್ಮಗಳನ್ನು ಮೂರು ಬಗೆಯಾಗಿ ವಿಭಾಗಿಸುತ್ತಾರೆ: ಕಾಮ್ಯ, ನಿತ್ಯ-ನೈಮಿತ್ತಿಕ ಮತ್ತು ನಿಷಿದ್ಧ. ಕಾಮ್ಯಕರ್ಮವನ್ನು ಮಾಡಿದರೆ ಅದಕ್ಕನುಗುಣವಾದ ಫಲ ದೊರೆಯುತ್ತದೆ, ಮಾಡದಿದ್ದರೆ ದೋಷವೇನೂ ಇಲ್ಲ. ಹಣ, ಇಂದ್ರಿಯಸುಖ ಇತ್ಯಾದಿ ಯಾವುದಾದರೂ ಪ್ರಾಪಂಚಿಕ ಆಸೆಗಳನ್ನು ಪೂರ್ತಿಗೊಳಿಸಲು ಆಚರಿಸುವ ಕರ್ಮವೇ ಕಾಮ್ಯಕರ್ಮ. ಜನಸಾಮಾನ್ಯರನೇಕರು ದೇವಾಲಯಗಳಿಗೆ ಹೋಗುವುದು, ಪೂಜಾನುಷ್ಠಾನಾದಿಗಳನ್ನು ಮಾಡುವುದು, ಸಾಧುಸಂತರೆಡೆಗೆ ಹೋಗುವುದು ಇತ್ಯಾದಿಗಳೂ ಕಾಮ್ಯಕರ್ಮವೇ. ಇವುಗಳನ್ನು ಮಾಡದಿದ್ದರೆ ವೈಯಕ್ತಿಕವಾಗಿ ಯಾವ ದೋಷವೂ ಇಲ್ಲ. ಇವು ಐಚ್ಛಿಕವಾದ ಕರ್ಮಗಳು.

ನಿತ್ಯ ನೈಮಿತ್ತಿಕ ಕರ್ಮಗಳು ಅನೈಚ್ಛಿಕವಾದುವುಗಳು, ಇವುಗಳು ಒಟ್ಟು ಕುಟುಂಬದ ಮತ್ತು ಸಮಾಜದ ವ್ಯವಸ್ಥೆಗಾಗಿ ಇರುವಂತಹವುಗಳು. ಕುಟುಂಬದ ವಿವಿಧ ವ್ಯಕ್ತಿಗಳ ನಡುವೆ ಇರುವ ಪರಸ್ಪರ ಕರ್ತವ್ಯಗಳು, ಅನೇಕ ಸಾಮಾಜಿಕ ಚಟುವಟಿಕೆಗಳು, ವಾತಾವರಣವನ್ನು ಶುದ್ಧವಾಗಿಡುವುದು, ಹಳ್ಳಿಯ ಅಥವಾ ನಗರದ ಸ್ವಚ್ಛತೆಯನ್ನು ಕಾಪಾಡುವುದು ಇವೇ ಮುಂತಾದ ಕರ್ತವ್ಯಗಳು ನಿತ್ಯ-ನೈಮಿತ್ತಿಕ ಕರ್ಮಗಳ ನಡುವೆ ಬರುತ್ತವೆ. ಇವುಗಳನ್ನು ನೆರವೇರಿಸಿದರೆ ವೈಯಕ್ತಿಕ ಲಾಭವೇನೂ ಇರುವುದಿಲ್ಲ, ಆದರೆ ಉಲ್ಲಂಘಿಸಿದರೆ ದೋಷವುಂಟಾಗುತ್ತದೆ. ರಸ್ತೆಯ ಸಂಚಾರ ನಿಯಮಗಳನ್ನು ಪಾಲಿಸಿದರೆ ನಮಗೆ ವೈಯಕ್ತಿಕ ಲಾಭವೇನೂ ಇಲ್ಲ, ಆದರೆ ಪಾಲಿಸದಿದ್ದರೆ ದೋಷ - ದಂಡ ತೆರಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ, ಯಾವುದೇ ಕ್ಷೇತ್ರದಲ್ಲಿ, ನಿಯಮಾನುಸಾರವಾಗಿ ಅತ್ಯಂತ ಕರ್ತವ್ಯನಿಷ್ಠೆಯಿಂದ ಕಾರ್ಯ ನಿರ್ವಹಿಸಿದವರಿಗೆ ಪ್ರೇರಕರೂಪದಲ್ಲಿ (incentives) ಬಹುಮಾನವನ್ನು ನೀಡಬಹುದು. ಆದರೆ ಬಹುಮಾನ ದೃಷ್ಟಿಯಿಂದಲೇ, ಸಾಮಾಜಿಕ ದೃಷ್ಟಿಯಿಲ್ಲದೆ, ಕಾರ್ಯ ನಿರ್ವಹಿಸುವುದು ಸರಿಯಲ್ಲ.

ಮೂರನೆಯದು ನಿಷಿದ್ಧ ಕರ್ಮ. ಇವುಗಳನ್ನು ಮಾಡಿದರೆ ದೋಷ; ಯಾವುದಾದರೂ ರೀತಿಯಲ್ಲಿ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಆದರೆ ಮಾಡದಿದ್ದರೆ ವೈಯಕ್ತಿಕವಾಗಿ ಯಾವ ಲಾಭವೂ ಇಲ್ಲ.

ಇನ್ನು ತ್ಯಾಗವೆಂದರೆ ಏನು? ಶ್ರೀಕೃಷ್ಣನ ಪ್ರಕಾರ ಸರ್ವ ಕರ್ಮಗಳ ಫಲತ್ಯಾಗವೇ ನಿಜವಾದ ತ್ಯಾಗ. ಇದು ಜೀವನದ ಎಲ್ಲ ಕ್ಷೇತ್ರಗಳಿಗೂ, ಅವಕ್ಕೆ ಸಂಬಂಧಪಟ್ಟ ಎಲ್ಲ ಕೆಲಸಗಳಿಗೂ ಅನ್ವಯಿಸುತ್ತದೆ. ಫಲತ್ಯಾಗ ವೆಂದರೆ ವೈಯಕ್ತಿಕ ಲಾಭನಷ್ಟಗಳನ್ನು ಪರಿಗಣಿಸದೆ, ನಿಸ್ವಾರ್ಥಭಾವದಿಂದಲೂ ಒಟ್ಟು ಸಮಾಜದ ಹಿತದೃಷ್ಟಿಯಿಂದಲೂ ಕಾರ್ಯನಿರ್ವಹಣೆ ಮಾಡುವುದು. ಇದು ಮೇಲೆ ಪ್ರಸ್ತಾಪಿಸಿದ ಎಲ್ಲ ಕರ್ಮಗಳಿಗೂ ಅನ್ವಯಿಸುತ್ತದೆ - ನಿಷಿದ್ಧ ಕರ್ಮಗಳಿಗೂ ಕೂಡ. ಮಾಡಿದ ತಪ್ಪಿಗೆ ಶಿಕ್ಷೆ ವಿಧಿಸುವುದು ಹಿಂಸೆಯಾದರೂ, ಅದು ತನ್ನ ಕಾರ್ಯವ್ಯಾಪ್ತಿಗೆ ಒಳಪಟ್ಟಿದ್ದರೆ, ಆ ರೀತಿ ಮಾಡದೇ ಇರುವುದು ದೋಷವಾಗುತ್ತದೆ, ಮಾಡಿದರೆ ಗುಣವಾಗುತ್ತದೆ. ವಿಧಿಸುವ ಶಿಕ್ಷೆಯ ಹಿಂದೆ ದ್ವೇಷಭಾವನೆಯಿದ್ದರೆ, ಅದು ಸ್ವಾರ್ಥಪರವಾಗುತ್ತದೆ - ಅಲ್ಲಿ ತ್ಯಾಗ ಇರುವುದಿಲ್ಲ. ಕೆಲವು ವಿಶೇಷ ಸಂದರ್ಭಗಳಲ್ಲಿ ಅಸತ್ಯವೂ ಗುಣವಾಗಬಹುದು. ಅದಕ್ಕಾಗಿಯೇ ಶ್ರೀಕೃಷ್ಣನು, ಯಾವುದರಿಂದ ಜನರ ಅತ್ಯಂತ ಹಿತ ಉಂಟಾಗುತ್ತದೆಯೋ ಅದೇ ಸತ್ಯ **(ಯದ್ ಭೂತಹಿತಮತ್ಯಂತಂ ತದ್ಧಿ ಸತ್ಯಂ ಪ್ರಕೀರ್ತಿತಂ)** ಎಂದು ಮಹಾಭಾರತದಲ್ಲಿ ಹೇಳುತ್ತಾನೆ. ಈ ದೃಷ್ಟಿಯಿಂದ ನೋಡಿದಾಗ ಕಾಮ್ಯಕರ್ಮಗಳೂ ಶ್ಲಾಘ್ಯವಾಗಬಹುದು. ವ್ಯಾಪಾರಿಗಳು, ಕೈಗಾರಿಕೋದ್ಯಮಿಗಳು ಮುಂತಾದವರು ಹಣ ಸಂಪಾದನೆಗಾಗಿಯೇ ಕೆಲಸ ಮಾಡುತ್ತಿದ್ದರೂ, ಅದೊಂದನ್ನೇ ಗುರಿಯಾಗಿಟ್ಟುಕೊಳ್ಳದೆ ತಮ್ಮ ಉದ್ಯಮವನ್ನು ವಿಸ್ತರಿಸುತ್ತ ಹೋದರೆ ದೇಶದ ಆರ್ಥಿಕ ಪ್ರಗತಿಯಾಗುವುದರ ಜೊತೆಗೆ ಅನೇಕರಿಗೆ ಜೀವನೋಪಾಯವನ್ನು ಒದಗಿಸಿದಂತಾಗುತ್ತದೆ. ಅಷ್ಟೇ ಅಲ್ಲದೆ ತಾವು ಗಳಿಸಿದ ಹಣವನ್ನು ಅನೇಕ ಸೇವಾಕಾರ್ಯಗಳಿಗೆ ಉಪಯೋಗಿಸಬಹುದು. ಹೀಗೆ ವಿಶಾಲಾರ್ಥದಲ್ಲಿ ತ್ಯಾಗವು ಎಲ್ಲ ಕ್ಷೇತ್ರಗಳಿಗೆ ಎಲ್ಲ ಕೆಲಸಗಳಿಗೂ ಅನ್ವಯಿಸುತ್ತದೆ.

ಸ್ವಾಮಿ ವಿವೇಕಾನಂದರೂ ಈ **ತ್ಯಾಗ** ಶಬ್ದವನ್ನು ತುಂಬ ವಿಶಾಲಾರ್ಥದಲ್ಲಿ ಉಪಯೋಗಿಸುತ್ತಾರೆ. ಅವರು ಹೇಳುತ್ತಾರೆ, ''ನಾಗರಿಕತೆಯ ತಳಹದಿಯೇ ಆತ್ಮಾರ್ಪಣೆ'' ಎಂದು. ಅವರ ಪ್ರಕಾರ, ಸಾಮಾಜಿಕ ಸಂಸ್ಥೆಗಳು, ಕುಟುಂಬ ವ್ಯವಸ್ಥೆ, ವಿವಾಹಪದ್ಧತಿ, ನೈತಿಕತೆ, ಒಳ್ಳೆಯದನ್ನು ಮಾಡುವುದು - ಇವೆಲ್ಲವೂ ತ್ಯಾಗದ ವಿವಿಧ ರೂಪಗಳು. ಸ್ವಾರ್ಥತ್ಯಾಗವಿಲ್ಲದೆ ಇವಾವುವೂ ಯಥಾರ್ಥ ರೂಪದಲ್ಲಿ ನಡೆಯಲಾರವು. ಆದ್ದರಿಂದ ಎಲ್ಲ ಸಾಮಾಜಿಕ ವ್ಯವಸ್ಥೆಗಳ ಹಿಂದೆಯೂ ತ್ಯಾಗ ಒಂದಲ್ಲ ಒಂದು ರೂಪದಲ್ಲಿ ಕೆಲಸ ಮಾಡುತ್ತದೆ.

ಆಧ್ಯಾತ್ಮಿಕ ಸಾಧಕನ ದೃಷ್ಟಿಯಿಂದ ಹೇಳುವುದಾದರೆ ತ್ಯಾಗದಲ್ಲಿ ಅನೇಕ ಹಂತಗಳಿವೆ. ಮೊದಲನೆಯದಾಗಿ ಬಾಹ್ಯ ಇಂದ್ರಿಯಗಳ ತ್ಯಾಗ - ಶ್ರೀರಾಮಕೃಷ್ಣರ ಮಾತಿನಲ್ಲಿ ಕಾಮಕಾಂಚನ ತ್ಯಾಗ. ವಿಷಯ ತ್ಯಾಗದ ಜೊತೆಗೆ ಸಂಗತ್ಯಾಗವೂ ಅತ್ಯಂತ ಆವಶ್ಯಕ, ಇಲ್ಲದಿದ್ದರೆ ವಿಷಯತ್ಯಾಗದ ಫಲ ದೊರೆಯುವುದಿಲ್ಲ. ಹೊರಗಡೆ ತ್ಯಾಗ

ಮಾಡಿ ಒಳಗಡೆ ವಿಷಯ ಚಿಂತನೆ ಮಾಡುತ್ತಿರುವುದು ಮಿಥ್ಯಾಚಾರವೆಂದು ಶ್ರೀಕೃಷ್ಣನು ನಿಂದಿಸುತ್ತಾನೆ. ವಿಷಯಾಸಕ್ತಿ ಇಲ್ಲದಿದ್ದರೂ ಹೆಸರು ಕೀರ್ತಿಗಳ ಆಸೆ ಅನೇಕರನ್ನು ಹಿಂಬಾಲಿಸುತ್ತದೆ. ಈ ತ್ಯಾಗ ವಿಷಯತ್ಯಾಗಕ್ಕಿಂತಲೂ ಕಠಿಣ. ಅನೇಕ ಸಾಧಕರು ಎಲ್ಲವನ್ನೂ ತ್ಯಾಗ ಮಾಡಿ ಕೊನೆಗೆ ಹೆಸರು ಕೀರ್ತಿಯ ಬಲೆಗೆ ಬಿದ್ದುಬಿಡುತ್ತಾರೆ. ಅವರು ಅಷ್ಟಕ್ಕೆ ನಿಲ್ಲದೆ, ಆಧ್ಯಾತ್ಮಿಕ ಆದರ್ಶವನ್ನು ಕಡೆಗಣಿಸುವುದರಿಂದ, ಕೊನೆಗೆ ವಿಷಯಾಸಕ್ತರೂ ಆಗಿಬಿಡುತ್ತಾರೆ. ಕೀರ್ತಿ ಕಾಮನೆಯನ್ನೂ ಮೀರಿಹೋದವರು ಕೆಲವರು ಮತಾಭಿಮಾನಕ್ಕೆ ಕಟ್ಟು ಬೀಳುತ್ತಾರೆ. ತನ್ನ ಮತವೇ ಸರಿ, ತನ್ನ ಅಭಿಪ್ರಾಯವೇ ಸರಿ, ಎಲ್ಲವೂ ತನ್ನಿಚ್ಛೆಯಂತೆಯೇ ಆಗಬೇಕು ಎಂಬ ಅಭಿಮಾನಕ್ಕೆ ವಶರಾಗುತ್ತಾರೆ. ಇದನ್ನೂ ಮೀರಿ ಹೋದವರನ್ನು 'ನಾನು ಮಹಾತ್ಯಾಗಿ, ನಾನು ದೊಡ್ಡಸಾಧಕ' ಎಂಬ ಅಹಂಕಾರವು ಕಬಳಿಸಬಹುದು. ಇಂತಹ ಸಾಧಕರು ಇತರರ ಪ್ರಾಪಂಚಿಕತೆಯನ್ನೂ, ವಿಷಯಾಸಕ್ತಿಯನ್ನೂ ಮಾನಸಿಕವಾಗಿ ಅಥವಾ ಬಾಹ್ಯವಾಗಿ ನಿಂದಿಸುತ್ತ ತಮ್ಮ ಸಾಧನೆಯ ಫಲವನ್ನೂ ತ್ಯಾಗದ ಫಲವನ್ನೂ ಕಳೆದುಕೊಳ್ಳುತ್ತಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಶ್ರೀರಾಮಕೃಷ್ಣರು ಹೇಳುವ ಒಂದು ಕಥೆ ತುಂಬಾ ಬೋಧಪ್ರದವಾದುದು. ಒಂದು ಆಶ್ರಮದಲ್ಲಿ ಸಾಧುವೊಬ್ಬನು ತಪೋನಿರತನಾಗಿರುತ್ತಾನೆ. ಆ ಆಶ್ರಮದ ಮುಂದೆ ವೇಶ್ಯೆಯೊಬ್ಬಳು ವಾಸಿಸುತ್ತಿರುತ್ತಾಳೆ. ಅವಳ ಮನೆಗೆ ಎಷ್ಟು ಜನ ಪ್ರತಿದಿನ ಬಂದುಹೋಗುತ್ತಾರೆ ಎಂಬುದರ ಕಡೆಗೇ ಸಾಧುವಿನ ಗಮನ. ಆಂತರಿಕವಾಗಿ ಆಕೆಯನ್ನು ಯಾವಾಗಲೂ ನಿಂದಿಸುತ್ತಿರುತ್ತಾನೆ. ಆಕೆಯಾದರೋ ತನ್ನ ವೃತ್ತಿಯ ಬಗ್ಗೆ ಪಶ್ಚಾತ್ತಾಪಪಡುತ್ತ ಯಾವಾಗಲೂ ಭಗವಂತನನ್ನು ಪ್ರಾರ್ಥಿಸುತ್ತಿರುತ್ತಾಳೆ. ಇಬ್ಬರ ದೇಹತ್ಯಾಗವಾದ ಮೇಲೆ ಆಕೆಗೆ ಸ್ವರ್ಗಪ್ರಾಪ್ತಿ, ಸಾಧುವಿನ ಗತಿ ನರಕ! ಇದಕ್ಕಾಗಿಯೇ ಶ್ರೀರಾಮಕೃಷ್ಣರು 'ಸಾಧು ಅಹಂ' ತ್ಯಾಗ ಮಾಡುವುದು ತುಂಬ ಕಷ್ಟ ಎಂದು ಹೇಳುತ್ತಿದ್ದರು.

ಎರಡನೆಯ ಶ್ಲೋಕದ ಭಾಷ್ಯದಲ್ಲಿ ಶ್ರೀಧರಸ್ವಾಮಿಗಳು ಫಲತ್ಯಾಗದ ಬಗ್ಗೆ ಹೀಗೆ ಬರೆಯುತ್ತಾರೆ: ''ಆಯಾಯ ಕರ್ಮಗಳಿಗೆ ಹೇಳಲಾದ ಫಲಗಳನ್ನು, ಅವು ಬಂಧನಕ್ಕೆ ಕಾರಣವಾದುದರಿಂದ, ತ್ಯಜಿಸಬೇಕು, ಆದರೆ ಕರ್ಮಗಳನ್ನಲ್ಲ. ಇಂತಹ ತ್ಯಾಗಬುದ್ಧಿಯಿಂದ, ಆತ್ಮಜ್ಞಾನವನ್ನು ಪಡೆಯುವ ಉದ್ದೇಶದೊಂದಿಗೆ ಸರ್ವಕರ್ಮಗಳನ್ನೂ ಆಚರಿಸಬೇಕು. ಈ ಆತ್ಮಜ್ಞಾನಾಕಾಂಕ್ಷೆಯನ್ನೇ 'ವಿವಿದಿಷಾ' ಎಂದು ಕರೆಯುವುದು. ನಿತ್ಯಾನಿತ್ಯವಸ್ತುವಿವೇಕದಿಂದ ದೇಹಾಭಿಮಾನವು ತೊಲಗಲಾಗಿ ಮನಸ್ಸು ಆತ್ಮಾಭಿಮುಖವಾಗುವುದನ್ನೇ (ಪ್ರತ್ಯಕ್‌ಪ್ರವಣತಾ) **ವಿವಿದಿಷಾ ಸ್ಥಿತಿ** ಎಂದು ಕರೆಯುವುದು. ಇಂತಹ ಸ್ಥಿತಿಯನ್ನು ಮುಟ್ಟಿದಾಗ ಕರ್ಮಗಳು ತಾವಾಗಿಯೇ ಬಿದ್ದು ಹೋಗುತ್ತವೆ.'' *ನೈಷ್ಕರ್ಮ್ಯಸಿದ್ಧಿಯ* ಒಂದು ಶ್ಲೋಕವನ್ನು ಅವರು ಈ ಸಂದರ್ಭದಲ್ಲಿ ಉದ್ಧರಿಸುತ್ತಾರೆ:

**ಪ್ರತ್ಯಕ್‌ಪ್ರವಣತಾಂ ಬುದ್ಧೇಃ ಕರ್ಮಾಣ್ಯುತ್ಪಾದ್ಯ ಶುದ್ಧಿತಃ ।**
**ಕೃತಾರ್ಥಾನ್ಯಸ್ತಮಾಯಾಂತಿ ಪ್ರಾವೃಡಂತೇ ಘನಾ ಇವ ॥**

''ಕರ್ಮಗಳು ಮನಶ್ಶುದ್ಧಿಯ ಮೂಲಕ ಬುದ್ಧಿಯನ್ನು ಆತ್ಮಾಭಿಮುಖವಾಗುವಂತೆ ಮಾಡಿ, ತಮ್ಮ ಕಾರ್ಯ ಮುಗಿದ ಮೇಲೆ,



ಮಳೆಯಾದ ಮೇಲೆ ಮೋಡಗಳು ನಿರ್ಗಮಿಸುವಂತೆ, ಕಣ್ಮರೆಯಾಗುತ್ತವೆ.''

ಶ್ರೀರಾಮಕೃಷ್ಣರು ಇದನ್ನು ಒಂದು ಸುಂದರ ಉದಾಹರಣೆಯ ಮೂಲಕ ವಿವರಿಸುತ್ತಾರೆ. ಗರ್ಭಿಣಿ ಸ್ತ್ರೀಗೆ ದಿನಕಳೆದಂತೆಲ್ಲ ಅತ್ತೆಯು ಆಕೆಯ ಕೆಲಸಗಳನ್ನು ಕಡಿಮೆಗೊಳಿಸುತ್ತ ಬರುತ್ತಾಳೆ. ಒಂಬತ್ತು ತಿಂಗಳು ತುಂಬಿ, ಮಗುವನ್ನು ಹೆತ್ತ ಮೇಲಂತೂ ಯಾವ ಕೆಲಸವೂ ಇಲ್ಲ, ಕೇವಲ ಮಗುವನ್ನಾಡಿಸುವುದಷ್ಟೇ. ಹೀಗೆ ಕೆಲಸ ತಾನಾಗಿಯೇ ಬಿದ್ದು ಹೋಗಬೇಕು, ಬಲಾತ್ಕಾರವಾಗಿ ಬಿಡುವಂತಿಲ್ಲ. ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿದಂತೆ ಒಂದೊಂದಾಗಿ ಕೆಲಸಗಳು ಕಡಿಮೆಯಾಗುತ್ತಾ ಬರುತ್ತವೆ, ಭಗವಂತನೇ ಅಂತಹ ಪರಿಸ್ಥಿತಿಯನ್ನು ನಿರ್ಮಿಸುತ್ತಾನೆ. ಸಂಗೀತವನ್ನು ಕಲಿಯುವ ಪ್ರಾರಂಭದಲ್ಲಿ ವ್ಯಕ್ತಿಯು ಹಾರ್ಮೋನಿಯಂ, ಹಾಡು, ತಾಳ, ರಾಗ ಇತ್ಯಾದಿಗಳ ಕಡೆ ತುಂಬ ಗಮನ ಹರಿಸಬೇಕಾಗುತ್ತದೆ. ಅದರಲ್ಲಿ ಸಾಕಷ್ಟು ಪಳಗಿದ ಮೇಲೆ ಇವೆಲ್ಲವೂ ಸ್ವಾಭಾವಿಕವಾಗಿಬಿಡುತ್ತವೆ. ಆಗ ರಾಗದ ಮೇಲೆ ಮಾತ್ರ ಅವನ ಗಮನ. ಆಧ್ಯಾತ್ಮಿಕ ಸಾಧನೆಯೆಂದರೆ ಹಂತಹಂತವಾಗಿ ಚಟುವಟಿಕೆ ಕಡಿಮೆಯಾಗುತ್ತ ಬರುವುದು. ಮುಂದೆ ಮನಸ್ಸು ಪರಿಶುದ್ಧವಾಗಿ ಅದರ ಚಟುವಟಿಕೆಗಳೆಲ್ಲ ನಿಂತ ಮೇಲೆ ಆತ್ಮದರ್ಶನವಾಗುತ್ತದೆ.

ಈ ಸ್ಥಿತಿಯನ್ನು ತಲುಪಲು ಮೊದಲು ಎಲ್ಲ ಕರ್ಮಗಳನ್ನೂ ಫಲಾಪೇಕ್ಷೆಯಿಲ್ಲದೆ ಮಾಡಬೇಕು, ಕರ್ಮಗಳು ದೋಷಯುಕ್ತವೆಂದು ಬಿಟ್ಟುಬಿಡಬಾರದು – ಇದು ಶ್ರೀಕೃಷ್ಣ ಅಭಿಪ್ರಾಯ. ತನ್ನ ನಿಶ್ಚಿತ ಅಭಿಪ್ರಾಯವನ್ನು ಶ್ರೀಕೃಷ್ಣನು ಐದನೆಯ ಶ್ಲೋಕದಲ್ಲಿ ಹೇಳುತ್ತಾನೆ:

**ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।**
**ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥**

''ಯಜ್ಞ, ದಾನ, ಮತ್ತು ತಪಸ್ಸು ಈ ಮೂರು ಕರ್ಮಗಳನ್ನು ಬಿಡಬಾರದು, ಅವು ಮಾಡಬೇಕಾದವುಗಳು. ಆಧ್ಯಾತ್ಮಿಕ ಪ್ರವೃತ್ತಿಯುಳ್ಳವರು ಈ ಮೂರು ಕರ್ಮ ಗಳಿಂದ ಮನಶ್ಶುದ್ಧಿಯನ್ನು ಪಡೆಯುತ್ತಾರೆ.''

ಇಲ್ಲಿ ಯಜ್ಞವೆಂದರೆ ಸ್ವಧರ್ಮಾಚರಣೆ, ಸಾಮಾಜಿಕ ಸ್ಥಿರತೆಗೆ ಇದು ಅತ್ಯಂತ ಆವಶ್ಯಕ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವಿಶಿಷ್ಟ

ವ್ಯಕ್ತಿತ್ವವನ್ನು ಉಳಿಸಿಕೊಂಡು ಅದಕ್ಕನುಸಾರವಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುತ್ತ ಸಮಾಜದಲ್ಲಿ ತನ್ನ ನಿರ್ದಿಷ್ಟ ಸ್ಥಾನವನ್ನು ಪಡೆಯಬೇಕು. ವಿದ್ಯಾರ್ಥಿಯು ತನ್ನ ಸ್ವಧರ್ಮವಾದ ಅಧ್ಯಯನದಲ್ಲಿಯೇ ನಿರತನಾಗಿರಬೇಕು. ಅದು ಬಿಟ್ಟು ಅವನು ರಾಜಕೀಯದಲ್ಲಿ ತೊಡಗಿದರೆ ಸಮಾಜದ ವ್ಯವಸ್ಥೆ ಕೆಡುತ್ತದೆ, ಮಾತ್ರವಲ್ಲದೆ ಅವನ ವಿದ್ಯಾರ್ಥಿ ಜೀವನವೂ ಕೆಡುತ್ತದೆ. ದೇಹದ ವಿವಿಧ ಅಂಗಗಳು ತಮ್ಮದೇ ಆದ ವಿಶಿಷ್ಟ ಕಾರ್ಯಗಳನ್ನು ಸಮರ್ಥ ರೀತಿಯಲ್ಲಿ ಮಾಡುತ್ತಿರುವಾಗ ಒಟ್ಟು ದೇಹವು ಆರೋಗ್ಯವಂತವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಕಟ್ಟಡಗಳ ನೆಲಕ್ಕೆ ಟೈಲುಗಳನ್ನು (tiles) ಜೋಡಿಸುತ್ತಾರೆ. ಪ್ರತಿಯೊಂದು ಟೈಲು ಕೂಡ ತನ್ನ ತನ್ನ ಸ್ಥಾನವನ್ನು ಅಲಂಕರಿಸಿ ಒಟ್ಟು ನೆಲದ ಸೌಂದರ್ಯಕ್ಕೆ ಪೂರಕವಾಗುತ್ತದೆ, ಮತ್ತು ಅದು ತನ್ನ ವೈಶಿಷ್ಟ್ಯವನ್ನು ಕಳೆದುಕೊಳ್ಳುವುದಿಲ್ಲ – ಅದರ ಅಸ್ತಿತ್ವವನ್ನು ನಾವು ಪ್ರತ್ಯೇಕವಾಗಿ ಗುರುತಿಸಬಹುದು. ಸಂಗೀತದಲ್ಲಿಯೂ ಕೂಡ ಎಲ್ಲ ವಾದ್ಯಗಳೂ ಕಲೆತು, ತಮ್ಮ ತಮ್ಮ ಧ್ವನಿವೈಶಿಷ್ಟ್ಯವನ್ನು ಕಳೆದುಕೊಳ್ಳದೆ, ಒಟ್ಟು ಸಂಗೀತದ ಸೌಂದರ್ಯವನ್ನು ಹೆಚ್ಚಿಸುತ್ತವೆ.

ಎರಡನೆಯದಾಗಿ **ದಾನ** – ಇತರರಿಗೆ ನಾವು ನೀಡಬೇಕಾದದು. ನಾವು ಇತರರಿಂದ, ಸಮಾಜದಿಂದ ಮತ್ತು ವಾತಾವರಣದಿಂದ ಅನೇಕ ವಿಷಯಗಳನ್ನು ಸ್ವೀಕರಿಸುತ್ತೇವೆ. ಹಾಗೆಯೇ ನಾವು ನೀಡುವುದನ್ನೂ ಕಲಿಯಬೇಕು. ಅನೇಕ ರೀತಿಯಲ್ಲಿ ನಾವು ದಾನ ಮಾಡಬಹುದು. ನಾಲ್ಕು ಒಳ್ಳೆಯ ಮಾತುಗಳನ್ನು ಆಡುವುದೂ ದಾನವೇ – ಇದರಿಂದ ಇತರರಿಗೆ ಎಷ್ಟೋ ಸಾಂತ್ವನ ದೊರೆಯುತ್ತದೆ. ಭೌತಿಕವಾಗಿ ಸಹಾಯ ಮಾಡುವುದು ದಾನವೇ. ಕೆಲವರು ದೂರದಲ್ಲಿರುವವರಿಗೆ ಅನೇಕ ಸೇವಾಕಾರ್ಯಗಳನ್ನು ಮಾಡಿ ಹತ್ತಿರದಲ್ಲಿರುವವರನ್ನು ಕಡೆಗಣಿಸುವುದು ಸರಿಯಲ್ಲ. ಇತರರ ಒಳಿತಿಗಾಗಿ ಭಗವಂತನನ್ನು ಪ್ರಾರ್ಥಿಸುವುದೂ ದಾನವೇ. ಹೀಗೆ ಭೌತಿಕವಾಗಿಯೂ, ವಾಚಿಕವಾಗಿಯೂ ಮತ್ತು ಭಾವನಾತ್ಮಕವಾಗಿಯೂ ನಾವು ದಾನ ಮಾಡಬಹುದು. ಇಂತಹ ದಾನದಿಂದ ಅತ್ಯಂತ ಆವಶ್ಯಕವಾದ ಉತ್ತಮ ಮಾನವೀಯ ಸಂಬಂಧ ಉಂಟಾಗುತ್ತದೆ.

ಇದಕ್ಕೆ ಸಂಬಂಧಪಟ್ಟಂತೆ ಒಂದು ಪ್ರಸಿದ್ಧ ಕಥೆಯಿದೆ. ಒಮ್ಮೆ ದೇಹದ ಬೇರೆ ಬೇರೆ ಅಂಗಗಳು ಹೊಟ್ಟೆಯ ವಿರುದ್ಧ ಮುಷ್ಕರ ಹೂಡಿದವು. 'ನಾವು ಕಷ್ಟಪಟ್ಟು ದುಡಿದು ಹೊಟ್ಟೆಯನ್ನು ತುಂಬಿಸುತ್ತ ಹೋಗುತ್ತೇವೆ, ಅದು ಮಾತ್ರ ಎಲ್ಲವನ್ನೂ ಕಬಳಿಸುತ್ತ ಸುಮ್ಮನೆ ಕುಳಿತಿರುತ್ತದೆ' ಎಂದು ಅವುಗಳು ಯೋಚಿಸಿ ತಮ್ಮ ತಮ್ಮ ಕಾರ್ಯವನ್ನು ನಿಲ್ಲಿಸಿದವು. ಈಗ ಕೈ ಬಾಯಿಗೆ ಹೋಗುವುದೇ ಇಲ್ಲ, ಹಲ್ಲಿಗೆ ಕೆಲಸವೇ ಇಲ್ಲ, ನಾಲಿಗೆಯೂ ನಿಶ್ಚಲ. ಇದು ಎಷ್ಟು ಕಾಲ ನಡೆಯುತ್ತದೆ? ಎಲ್ಲ ಅಂಗಗಳೂ ದುರ್ಬಲವಾಗುತ್ತ ಬರತೊಡಗಿದವು, ಕೊನೆಗೆ ಸಾವಿನ ಸ್ಥಿತಿ ಬಂದೊದಗಿತು. ಈಗ ಅವುಗಳಿಗೆ ಅರ್ಥವಾಯಿತು, ಪರಸ್ಪರ ಸಹಾಯದಿಂದ ಮಾತ್ರವೇ ಎಲ್ಲರ ಒಳಿತು. ಇದು ದಾನದ ಮಹತ್ವವನ್ನು ಸೂಚಿಸುತ್ತದೆ.

ಮೂರನೆಯದು **ತಪಸ್ಸು** – ಆಧ್ಯಾತ್ಮಿಕ ಉನ್ನತಿಗಾಗಿ ಮಾಡುವ ಸಾಧನೆಗಳು ದೇಹದಂಡನೆಯಲ್ಲ, ನಮ್ಮ ಜೀವನವೆಂಬ ಮಂಜುಗಡ್ಡೆಯು ಯಜ್ಞದಿಂದ ಕರಗುತ್ತದೆ, ದಾನದಿಂದ ನೀರಾಗಿ ಹರಿದು ಬಹುಜನರನ್ನು ತಣಿಸುತ್ತದೆ ಮತ್ತು ತಪಸ್ಸಿನಿಂದ ಆವಿಯಾಗಿ ಮೇಲೇರುತ್ತದೆ.

ಈ ಮೂರು ಬಗೆಯ ಕರ್ಮಗಳನ್ನೂ ತ್ಯಾಗ ಮನೋಭಾವದಿಂದ, ನಿರ್ಲಿಪ್ತತೆಯಿಂದ ಆಚರಿಸಬೇಕು, ಎಂದು ಶ್ರೀಕೃಷ್ಣನು ಹೇಳುತ್ತಾನೆ. ಇವುಗಳ ಹಿಂದೆ ತ್ಯಾಗವಿರಬೇಕೇ ಹೊರತು ಇವುಗಳನ್ನೇ ತ್ಯಾಗ ಮಾಡುವುದಲ್ಲ. ಸಾತ್ತ್ವಿಕ, ರಾಜಸಿಕ ಮತ್ತು ತಾಮಸಿಕ ಎಂದು ಮೂರು ಬಗೆಯ ತ್ಯಾಗಗಳಿವೆ ಎಂದು ಅವನು ಹೇಳುತ್ತಾನೆ. ಸಾತ್ತ್ವಿಕ ತ್ಯಾಗದ ಲಕ್ಷಣಗಳು: ಅದರಲ್ಲಿ ಆಧ್ಯಾತ್ಮಿಕ ಆದರ್ಶವಿರುತ್ತದೆ, ಅದು ಹೃತ್ಪೂರ್ವಕವಾಗಿರುತ್ತದೆ. ಅದರಿಂದ ಸಾರ್ಥಕ ಭಾವವುಂಟಾಗುತ್ತದೆ, ಅದರಲ್ಲಿ ಬಾಹ್ಯ ಒತ್ತಡವಿರುವುದಿಲ್ಲ ಮತ್ತು ಅದು ಬೆಳವಣಿಗೆಯನ್ನು ಸೂಚಿಸುತ್ತದೆ – ತೆಂಗಿನ ಮರವು ಬೆಳೆದಂತೆಲ್ಲ ತನ್ನ ಗರಿಯನ್ನು ಬೀಳಿಸುವಂತೆ. ರಾಜಸಿಕ ತ್ಯಾಗದ ಲಕ್ಷಣಗಳು: ಅದು ಅಹಂಕಾರಯುಕ್ತವಾಗಿರುತ್ತದೆ, ಭಾವೋದ್ವೇಗದಿಂದ ಪ್ರೇರಿತವಾಗಿರುತ್ತದೆ, ಕೆಲವೊಮ್ಮೆ ಭಯದಿಂದ ಕೂಡಿರುತ್ತದೆ (ಕಾಯಿಲೆಯ ಭಯದಿಂದ ತಿಂಡಿ ತ್ಯಜಿಸುವುದು), ಮತ್ತು ಕೆಲವೊಮ್ಮೆ ಯಾವುದಾದರೂ ಆಸೆಗಳಿಂದಲೂ ಪ್ರೇರಿತವಾಗಿರುತ್ತದೆ (ಮುಂದಿನ ಸುಖಕ್ಕಾಗಿ ಇಂದಿನ ಸುಖವನ್ನು ತ್ಯಜಿಸುವುದು – ಸ್ವರ್ಗಸುಖಕ್ಕಾಗಿ ದೇಹದಂಡನೆಯ ತಪಸ್ಸನ್ನಾಚರಿಸುವುದು). ಸೋಮಾರಿತನದಿಂದಲೂ ಭ್ರಮೆಯಿಂದಲೂ ಕರ್ಮವನ್ನು ತ್ಯಜಿಸುವುದು ತಾಮಸ ತ್ಯಾಗ. ಕರ್ಮದ ಆವಶ್ಯಕತೆಯಿಲ್ಲ ಎಂಬ ಭ್ರಮೆ. ಕರ್ಮವು ಕಾಯಿಲೆಗೆ ಔಷಧಿ ಇದ್ದ ಹಾಗೆ. ಅನೇಕರು, ಸರಿಯಾದ ತಿಳಿವಳಿಕೆ ಇಲ್ಲದೆ, ಕಾಯಿಲೆ ಗುಣವಾಗಿದೆ, ಔಷಧಿ ಸಾಕು ಎಂದು ಭ್ರಮಿಸಿ, ಅದನ್ನು ಬಿಟ್ಟುಬಿಡುತ್ತಾರೆ. ಇದರಿಂದ ಕಾಯಿಲೆ ಮತ್ತಷ್ಟು ಉಲ್ಬಣವಾಗುತ್ತದೆ. ಕಂಬಳಿ ಹುಳವು ರೆಕ್ಕೆ ಬೆಳೆಯುವವರೆಗೂ ಕೋಶದೊಳಗೆ ತಾಳ್ಮೆಯಿಂದ ಇರಬೇಕು. ಹಾಗೆಯೇ ನಾವು ಕರ್ಮಕೋಶದೊಳಗೆ ಇರಬೇಕು.

ಶ್ರೀಕೃಷ್ಣನು ಹತ್ತನೆಯ ಶ್ಲೋಕದಲ್ಲಿ ಸಾತ್ತ್ವಿಕ ತ್ಯಾಗಿಯ ಲಕ್ಷಣಗಳನ್ನು ಹೇಳುತ್ತಾನೆ. ಅವನು ತನಗಿಷ್ಟವಲ್ಲದ ಕರ್ಮವನ್ನು ದ್ವೇಷಿಸುವುದೂ ಇಲ್ಲ ಮತ್ತು ತನಗಿಷ್ಟವಾದ ಕರ್ಮಕ್ಕೆ ಅಂಟಿಕೊಳ್ಳುವುದೂ ಇಲ್ಲ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ತನ್ನ ಹೃದಯಕ್ಕೆ ಮೆಚ್ಚುಗೆಯಾದ ಕೆಲಸವನ್ನು ಮೂರ್ಖಶಿಖಾಮಣಿಯೂ ಯಶಸ್ವಿಯಾಗಿ ಮಾಡಿ ಮುಗಿಸಬಲ್ಲನು. ಆದರೆ ಪ್ರತಿಯೊಂದು ಕೆಲಸವನ್ನೂ ತನಗೆ ಮೆಚ್ಚುಗೆಯಾಗುವಂತೆ ಪರಿವರ್ತಿಸಬಲ್ಲವನೇ ಬುದ್ಧಿವಂತ ವ್ಯಕ್ತಿ.'' ಆಂಗ್ಲ ಭಾಷೆಯಲ್ಲಿ ಒಂದು ಹೇಳಿಕೆಯಿದೆ: ''ತನಗಿಷ್ಟವಾದುದನ್ನು ಪಡೆಯಲು ಪ್ರಯತ್ನಿಸುವುದಲ್ಲ, ಪಡೆದುದನ್ನೇ ಇಷ್ಟಪಡುವುದು ಮುಖ್ಯ.'' (We should not try to get what we wish, but wish what we get.) ಎಲ್ಲ ಬಗೆಯ ಕೆಲಸಗಳು ಸೇರಿ ಒಂದು ಕಾರ್ಯಸಿದ್ಧಿಯಾಗುತ್ತದೆ. ಇದಕ್ಕೆ ಹಿರಿಯರು ಒಂದು ಪ್ರಸಿದ್ಧವಾದ ಉದಾಹರಣೆಯನ್ನು ಕೊಡುತ್ತಾರೆ: ನಮಗೆಲ್ಲರಿಗೂ ಮೆಣಸಿನಕಾಯಿ ಬೋಂಡವೆಂದರೆ ಅತ್ಯಂತ ಪ್ರಿಯ. ಆದರೆ ಬರಿಯ ಮೆಣಸಿನಕಾಯನ್ನಾಗಲಿ, ಹಿಟ್ಟನ್ನಾಗಲಿ, ಎಣ್ಣೆಯನ್ನಾಗಲಿ ಯಾರೂ ಇಷ್ಟಪಡುವುದಿಲ್ಲ. ಇಷ್ಟಪಡದ ವಸ್ತುವೂ ಅತ್ಯಂತ ಇಷ್ಟಪಡುವ ಒಂದು ವಸ್ತುವಾಗುತ್ತದೆ. ಹೀಗೆಯೇ ಪ್ರತಿ ಕೆಲಸವೂ ಕೂಡ.